ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 24–08–2018

# ಪತ್ರಿಕಾ ಆಮಂತ್ರಣ

1. ಸರ್ವ ಶಿಕ್ಷಣ ಅಭಿಯಾನ ಇಲಾಖಾ ವತಿಯಿಂದ ವೃತ್ತಿ ಮಾರ್ಗದರ್ಶನ ಮತ್ತು ಕೌನ್ಸೆಲಿಂಗ್ ಸೆಲ್‌ಗಳ (ಸಿ.ಜಿ.ಸಿ.ಸಿ.ಸಿ.) ಪ್ರಾರಂಭಿಕ ಮತ್ತು ಶಿಕ್ಷಣದ ವೋಕೇಶನೈಜೇಷನ್ ಕುರಿತು ಸೆಕ್ಟರ್ ಎಕ್ಸ್‌ಪರ್ಟ್‌ಗಳ ಸಮಾಲೋಚನೆ:

<u>ಉದ್ಘಾಟನೆ:</u>

ಅನಂತಕುಮಾರ್ ಹೆಗ್ಡೆ,
ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವರು,
ಎನ್. ಮಹೇಶ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ದಿನಾಂಕ: 25–08–2018 ಶನಿವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ಲಲಿತ್ ಅಶೋಕ್, ಕುಮಾರ ಕೃಪ ಹೈಗ್ರೌಂಡ್, ಬೆಂಗಳೂರು

2. ಬೆಳ್ಳಿ ಸಿನಿಮಾ ಬೆಳ್ಳಿ ಮಾತು (ಮಕ್ಕಳ ಚಿತ್ರ ಸಂಚಿಕೆ)

ಪ್ರಸ್ತಾವನೆ:
ಎನ್.ಆರ್. ವಿಶುಕುಮಾರ್,
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಉದ್ಘಾಟನೆ:
ಶ್ರೀ ರಕ್ಷಿತ್ ಶೆಟ್ಟಿ,
ಖ್ಯಾತ ಚಲನಚಿತ್ರ ನಿರ್ದೇಶಕರು

ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು
ದಿನಾಂಕ: 25-08-2018 ಶನಿವಾರ ಬೆಳಿಗ್ಗೆ 11-00 ಗಂಟೆಗೆ

ಪತ್ರಿಕಾ ಪ್ರಕಟಣೆ

**ಸಂಖ್ಯೆ: 879/979**

## ಆರ್. ಅಶೋಕ್ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಮೊದಲ ಸಭೆ

ಬೆಂಗಳೂರು, ಆಗಸ್ಟ್ 24, (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಮಂಡಲದ 2018-19ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಪ್ರಾರಂಭಿಕ ಸಭೆಯು ವಿಧಾನಸಭಾ ಸದಸ್ಯರು ಹಾಗೂ ಸಮಿತಿಯ ಅಧ್ಯಕ್ಷರೂ ಆದ ಆರ್. ಅಶೋಕ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಿಧಾನಸೌಧದ ಕೊಠಡಿ ಸಂಖ್ಯೆ 106 ರಲ್ಲಿ ಇಂದು ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಆರ್. ಅಶೋಕ್ ಅವರು ಸದನವು ಮಂಜೂರು ಮಾಡಿದ ಮೊಬಲುಗಳ ವಿನಿಯೋಗದ ತಪಾಸಣೆ, ಸರ್ಕಾರದ ವಾರ್ಷಿಕ ಲೆಕ್ಕಗಳು, ಉಪಯುಕ್ತತೆ, ಆಯವ್ಯಯದ ಪಟ್ಟಿ, ಲಾಭ ಮತ್ತು ಲೆಕ್ಕಗಳ ವಿವರಣೆಗಳನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸುವುದು ಈ ಸಮಿತಿಯ ಪ್ರಮುಖ ಕರ್ತವ್ಯವಾಗಿರುತ್ತದೆ ಎಂದು ಅವರು ತಿಳಿಸಿದರು.

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ವಿಧಾನಮಂಡಲದ ಪ್ರಮುಖ ಆರ್ಥಿಕ ಸಮಿತಿಯಾಗಿದ್ದು ಕಾರ್ಯಾಂಗವನ್ನು ಶಾಸಕಾಂಗಕ್ಕೆ ಉತ್ತರದಾಯಕವಾಗಿಸುವಲ್ಲಿ ಮಹತ್ತದ ಪಾತ್ರವಹಿಸುತ್ತದೆ ಎಂದು ತಿಳಿಸಿದ ಸಮಿತಿಯ ಅಧ್ಯಕ್ಷರು ಸರ್ಕಾರದ ಇಲಾಖೆಗಳ ಹಣಕಾಸು ನಿರ್ವಹಣೆಯಲ್ಲಿರುವ ಲೋಪದೋಷಗಳನ್ನು ಸಮಯೋಚಿತವಾಗಿ ಸರಿಪಡಿಸುವಲ್ಲಿ ಸಮಿತಿಯು ಗಮನಾರ್ಹ ಪಾತ್ರ ವಹಿಸಬಹುದಾಗಿದೆ ಎಂದು ತಿಳಿಸಿದರು.

ಸಮಿತಿಯ ಸದಸ್ಯರು ಪ್ರಸ್ತಾಪಿಸಲಾಗಿರುವ ಕಾರ್ಯ ಯೋಜನೆಯನ್ನು ಸಲಹಾರ್ತಕವೆಂದು ಪರಿಗಣಿಸಿ ತಮ್ಮ ಅಭಿಪ್ರಾಯಗಳನ್ನು ಕಳುಹಿಸಿಕೊಂಡು ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಚರ್ಚಿತವಾಗಿರುವಂತೆ ಸಭೆಯ ನಡಾವಳಿಗಳನ್ನು ಸದಸ್ಯರಿಗೆ ಒಂದು ವಾರದ ಮೊದಲೇ ನೀಡುವುದು, ಸದಸ್ಯರು ಪ್ರಸ್ತಾಪಿಸಿದಂತೆ ಸಾಮಾಜಿಕ ನ್ಯಾಯ ಒದಗಿಸುವ ವಿಷಯಗಳನ್ನು ಚರ್ಚಿಸುವುದು. ಸದರಿ ಸಮಿತಿಯು ಜಿಲ್ಲೆಗಳಿಗೆ ಭೇಟಿ ನೀಡಿ ಸಭೆ ನಡೆಸುವುದು. ಅನುಸರಣಾ ವರದಿಯನ್ನು 6 ತಿಂಗಳ ಒಳಗೆ ನೀಡುವುದರ ಬದಲು ಮೂರು ತಿಂಗಳೊಳಗೆ ನೀಡುವಂತೆ ಕಾನೂನಿಗೆ ಮಾರ್ಪಾಡು ಮಾಡುವುದು, ಸೇರಿದಂತೆ ಇತರೆ ಪ್ರಮುಖ ವಿಷಯಗಳನ್ನು ಆದ್ಯತೆ ಮೇಲೆ ಸಭೆಯ ಮುಂದೆ ತಂದು ತುರ್ತು ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಸಮಿತಿಯ ಸದಸ್ಯರುಗಳಾದ ಹೆಚ್.ಕೆ. ಪಾಟೀಲ್, ಗೋವಿಂದ ಎಂ. ಕಾರಜೋಳ, ಹೆಚ್. ವಿಶ್ವನಾಥ್, ಎಸ್.ಆರ್. ಪಾಟೀಲ್, ಸಿ.ಎಂ. ಇಬ್ರಾಹಿಂ, ಅರವಿಂದ ಲಿಂಬಾವಳಿ, ವಿಶ್ವೇಶ್ವರ ಹೆಗ್ಗಡೆ ಕಾಗೇರಿ, ಜೆ.ಸಿ. ಮಾದುಸ್ವಾಮಿ, ಅರಗಜ್ಞಾನೇಂದ್ರ, ಬಿ.ಎ. ಶರವಣ, ಡಾ. ವೈ.ಎ. ನಾರಾಯಣಸ್ವಾಮಿ ಸೇರಿದಂತೆ ಇತರೆ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್ ಅವರು ಸಭೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ಸರ್ಕಾರದ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಆಯುಕ್ತರುಗಳು ಸೇರಿದಂತೆ ಸಮಿತಿಯ ಇತರ ಸದಸ್ಯರುಗಳು ಉಪಸ್ಥಿತರಿದ್ದರು.

**ಸಂಖ್ಯೆ: 880/980**

# ಬ್ರಹ್ಮಶ್ರೀ ನಾರಾಯಣಗುರು ಜಯಂತಿ

ಬೆಂಗಳೂರು, ಆಗಸ್ಟ್ 24, (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಆಗಸ್ಟ್ 27 ರಂದು ಸಂಜೆ 5.30 ಗಂಟೆಗೆ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿಯನ್ನು ಕೇರಳದ ವರ್ಕಲದಲ್ಲಿರುವ ಶಿವಗಿರಿ ಮಠದ ಶ್ರೀ ಸತ್ಯಾನಂದ ತೀರ್ಥ ಸ್ವಾಮೀಜಿಯವರ ಸಾನಿಧ್ಯದಲ್ಲಿ ಆಚರಿಸಲಾಗುತ್ತಿದೆ.

ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ಅಂದು ಈ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಅನಂತಕುಮಾರ್, ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಡಾ.

ಜಯಮಾಲ ರಾಮಚಂದ್ರ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮಹಾಪೌರ ಆರ್. ಸಂಪತ್‌ರಾಜ್ ಹಾಗೂ ರಾಜ್ಯಸಭಾ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಸೇರಿದಂತೆ ಹಲವು ವಿಶೇಷ ಆಹ್ವಾನಿತರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಈ ಕಾರ್ಯಕ್ರಮ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಉದಯರ್ ಬಿ. ಗರುಡಾಚಾರ್ ಅವರು ವಹಿಸಲಿದ್ದಾರೆ.

ಅಂದು ಸಂಜೆ 4.00 ಗಂಟೆಗೆ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದ ಬಳಿಯಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಬ್ರಹ್ಮಶ್ರೀ ನಾರಾಯಣ ಗುರುಗಳ ಸ್ತಬ್ಧಚಿತ್ರದೊಂದಿಗೆ ಜಾನಪದ ವೈವಿಧ್ಯಮಯವಾದ ಚಂಡೆ ವಾದನ, ಹುಲಿವೇಷ, ಕೋಲು ನೃತ್ಯ, ಕಂಗೀಲು ನೃತ್ಯ, ಜೋಗತಿ ನೃತ್ಯ, ಡೊಳ್ಳು ಕುಣಿತ, ಯಕ್ಷಗಾನ, ಕೊಂಬು ಕಹಳೆ, ಚಿಟ್ಟಿಮೇಳ ಹಾಗೂ ಆಟಿಕಳಂಜ ಕಲಾ ತಂಡಗಳ ಮೆರವಣಿಗೆಯನ್ನು ಸಹ ಹಮ್ಮಿಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ಬ್ರಹ್ಮಶ್ರೀ ಗುರುಗಳ ಜೀವನ ಸಾಧನೆ ಕುರಿತು ಛಾಯಾಚಿತ್ರ ಹಾಗೂ ವಸ್ತು ಪ್ರದರ್ಶನ, ಸಂಜೆ 5.30 ಗಂಟೆಗೆ ಕೋಲಾರದ ಡಿ.ಆರ್. ರಾಜಪ್ಪ ಮತ್ತು ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 881/981**

## ಆಗಸ್ಟ್ 28 ರಿಂದ 30 ರವರೆಗೆ
## “24ನೇ ತಿಂಗಳ ಚಿತ್ರ” ಪ್ರದರ್ಶನ ಕಾರ್ಯಕ್ರಮ

ಬೆಂಗಳೂರು, ಆಗಸ್ಟ್ 24, (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯು ಆಗಸ್ಟ್ 28 ರಿಧದ 30 ರವರೆಗೆ ಯುವ ಕಲಾವಿದರ ಕೃತಿಗಳ ಪ್ರತಿ ತಿಂಗಳ ಪ್ರದರ್ಶನ “24ನೇ ತಿಂಗಳ ತಿಂಗಳ ಚಿತ್ರ” ವನ್ನು ವರ್ಣಆರ್ಟ್ ಗ್ಯಾಲರಿ, 2ನೇ ಮಹಡಿ, ಕನ್ನಡ ಭವನ, ಬೆಂಗಳೂರು ಇಲ್ಲಿ ಏರ್ಪಡಿಸಿದೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎ. ಹೆಗಡೆ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಆಧ್ಯಕ್ಷೆ ಪ್ರೊ. ಎಂ.ಜೆ. ಕಮಲಾಕ್ಷಿ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

**ಸಂಖ್ಯೆ: 882/982**

# ಎಸಿಬಿ ದಾಳಿ

**ಬೆಂಗಳೂರು, ಆಗಸ್ಟ್ 24, (ಕರ್ನಾಟಕ ವಾರ್ತೆ)**

ಶಿವಮೊಗ್ಗ ಗಾಂಧಿನಗರ ನಿವಾಸಿಯು ತಮ್ಮ ತಂದೆಯ ಹೆಸರಿನಲ್ಲಿರುವ ನಿವೇಶನಕ್ಕೆ ಪೌತಿ ಖಾತೆ ಮಾಡಿ ನಂತರ ಫಿರ್ಯಾದುದಾರರ ಹೆಸರಿಗೆ ಖಾತೆ ವರ್ಗಾವಣೆ ಕೋರಿ ನಿಧಿಗೆ ಗ್ರಾಮ ಪಂಚಾಯ್ತಿಗೆ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ಆರ್. ಕುಮಾರ್, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ ರವರು ಅರ್ಜಿದಾರರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಲು ರೂ. 45,000/- ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 23.08.2018 ರಂದು ಶ್ರೀ. ಆರ್. ಕುಮಾರ್, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ ರವರು ಲಂಚದ ಹಣ ರೂ. 30,000/-ಗಳನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 883/983**

# <u>ACB Raid</u>

**Bengaluru August 24 (Karnataka Information)**

A resident of Gandhinagar, Shimoga had sought for transfer of Pouti Khata to his name for a site at Nidige Grama Panchayat. Sri.R.Kumar, Vice President, Nidige Gram Panchayat had demanded a bribe of Rs.45,000/- to get the work done.

On 23.08.2018 the Officials of ACB PS Shimoga have trapped and arrested Sri.R.Kumar, Vice President, Nidige Gram Panchayat while receiving bribe amount of Rs.30,000/- from the complainant. The bribe amount has been seized. The case is under investigation says official press release.